# ಅಯೋಧ್ಯಾ ರಾಮ ಮತ್ತು ರಾಮಕೃಷ್ಣರು

### ಶ್ರೀರಾಮಕೃಷ್ಣವಚನವೇದದಿಂದ

**ಶ್ರೀರಾಮಕೃಷ್ಣ ಪರಮಹಂಸರು** ಒಮ್ಮೆ ಮನಮೋಹನನೆಂಬ ಭಕ್ತನಿಗೆ ಹೇಳಿದರು: 'ಎಲ್ಲವೂ ರಾಮನೆ ಆಗಿ ಕಾಣುತ್ತಿದ್ದಾನೆ; ರಾಮನೆ ನಿಮ್ಮ ಪ್ರತಿಯೊಬ್ಬರ ರೂಪವನ್ನು ಧರಿಸಿ ಕುಳಿತಿರುವಂತೆ ಕಾಣುತ್ತಿದೆ.'

ಮನಮೋಹನ: 'ಹೌದು, ರಾಮನೆ ಎಲ್ಲಾ ಆಗಿದ್ದಾನೆ. ಆದರೆ ನೀವು ಹೇಳುವಂತೆ ಎಲ್ಲಾ ನೀರೂ ನಾರಾಯಣನೆ ಆದರೂ ಕೆಲವನ್ನು ಕುಡಿಯಬಹುದು. ಕೆಲವದರಲ್ಲಿ ಮುಖ ತೊಳೆಯಬಹುದು. ಇನ್ನೂ ಕೆಲವು ಮುಸುರೆ ತೊಳೆಯಲು ಮಾತ್ರವೇ ಉಪಯೋಗವಾಗುತ್ತದೆ.'

ಶ್ರೀರಾಮಕೃಷ್ಣರು: 'ಅದೇನೋ ನಿಜ. ಆದರೆ ಎಲ್ಲವೂ ಆತನೇ ಆಗಿರುವುದು ಕಾಣಬರುತ್ತಿದೆ.'

* * *

ಮೇಲ್ಕಂಡ ಪ್ರಸಂಗಕ್ಕೆ ಆರು ದಿನಗಳ ಹಿಂದೆ, ಶ್ರೀ ರಾಮಕೃಷ್ಣರು ಕಲ್ಕತ್ತಾದ ಬಡೋಬಜ್ಜಾರಿನಲ್ಲಿ ಮಾರ್ವಾಡಿ ಭಕ್ತರು ಆಚರಿಸಿದ್ದ 'ಅನ್ನಕೂಟ'ದ ಉತ್ಸವ ಮತ್ತು 'ಮಯೂರ ಮುಕುಟಧಾರಿ' (ಕೃಷ್ಣ) ಉತ್ಸವಕ್ಕೆ ಹೋಗಿದ್ದರು. ಮಾತಿನ ಸಂದರ್ಭದಲ್ಲಿ ಅವರು ಯಜಮಾನನಿಗೆ ಹೇಳಿದರು: 'ರಾಮನನ್ನು ಕರೆಯುತ್ತಾ ಹೋಗು; ಆತನ ಚಿಂತನೆ ಮಾಡು. ಮಹಾತ್ಮರ ಕೃಪೆ ದೊರೆಯದಿದ್ದರೆ ಏನೂ ಆಗದು.'

ಯಜಮಾನ: 'ಮಹಾರಾಜ್, ನೀವೆ ಆ ರಾಮ'

ಶ್ರೀರಾಮಕೃಷ್ಣರು : 'ಅದು ಹೇಗೆ? ಅಲೆಗಳೇನೊ ನದಿಯವು; ನದಿ ಅಲೆಯದೆ?'

ಯಜಮಾನ : 'ಕೇವಲ ಮಹಾತ್ಮರ ಹೃದಯದಲ್ಲೇ ರಾಮ ಇರುವುದು. ಆತನನ್ನು ಅಲ್ಲಿ ವಿನಾ ಬೇರೆಲ್ಲಿಯೂ ನೋಡಲಾಗುವುದಿಲ್ಲ. ನೋಡೋಣ ಅಂದರೆ, ಈಗ ಅವನು ಅವತರಿಸಿಲ್ಲವಲ್ಲ.'

ಶ್ರೀರಾಮಕೃಷ್ಣರು : (ನಗುತ್ತಾ) 'ಈಗ ಅವನು ಅವತರಿಸಿಲ್ಲ ಎಂಬುದನ್ನು ನೀನು ಹೇಗೆ ಅರಿತೆ?'

ಯಜಮಾನ ಸುಮ್ಮನಿದ್ದಾನೆ.

'ಅವತಾರವನ್ನು ಎಲ್ಲರೂ ಗುರುತಿಸಲಾರರು; ನಾರದ ರಾಮಚಂದ್ರನ ದರ್ಶನಕ್ಕಾಗಿ ಹೋದಾಗ, ಆತ ಎದ್ದು ನಿಂತು ನಾರದರಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ಬಳಿಕ ಹೇಳಿದ: "ನಾವು ಸಂಸಾರಿಗಳು. ನಿಮ್ಮಂಥ ಸಾಧುಗಳು ಬಂದು ದರ್ಶನ ಕೊಡದಿದ್ದರೆ ನಾವು ಪವಿತ್ರರಾಗುವುದು ಎಂತು?" ಮತ್ತೆ ರಾಮಚಂದ್ರ ಸತ್ಯಪರಿಪಾಲನೆಗಾಗಿ ವನವಾಸಕ್ಕೆ ತೆರಳಿದಾಗ, ರಾಮಚಂದ್ರನಿಗೆ ವನವಾಸ ದೊರಕಿದೆ ಎಂಬುದನ್ನು ಕೇಳಿ ಅನೇಕ ಋಷಿಗಳು ಉಪವಾಸ ವ್ರತ ಕೈಗೊಂಡಿರುವುದನ್ನು ರಾಮಚಂದ್ರ ನೋಡಿದ. ರಾಮಚಂದ್ರ ಸಾಕ್ಷಾತ್ ಪರಬ್ರಹ್ಮನೇ ಎಂಬುದು ಅನೇಕರಿಗೆ ಗೊತ್ತಿರಲಿಲ್ಲ.'

ಯಜಮಾನ : 'ನೀವೇ ಆ ರಾಮಚಂದ್ರ.'

ಶ್ರೀರಾಮಕೃಷ್ಣರು: 'ರಾಮ!ರಾಮ! ಹಾಗೆಲ್ಲಾ ಹೇಳಬಾರದು.' ಹೀಗೆಂದು ಹೇಳಿ ಕೈಜೋಡಿಸಿ ಪ್ರಣಾಮ ಮಾಡಿದರು. ಮತ್ತೆ ಹೇಳಿದರು: 'ಆ ರಾಮ ಸಕಲ ಜೀವ ರಾಶಿಗಳ ಅಂತರ್ಯಾಮಿ; ಆತ ಜಗತ್ತನ್ನೆಲ್ಲಾ ವ್ಯಾಪಿಸಿ ಕೊಂಡಿದ್ದಾನೆ. ನಾನು ನಿಮ್ಮಗಳ ದಾಸ. ಆ ರಾಮನೆ ಈ ಜೀವ, ಜಂತು, ಮನುಷ್ಯ ಸಕಲವೂ ಆಗಿದ್ದಾನೆ.'

ಯಜಮಾನ : 'ಮಹರಾಜ್, ನಮಗೆಲ್ಲಾ ಅದು ಗೊತ್ತಿಲ್ಲ—'

ಶ್ರೀರಾಮಕೃಷ್ಣರು : 'ನಿನಗೆ ಗೊತ್ತಿರಲಿ, ಗೊತ್ತಿಲ್ಲದಿರಲಿ, ನೀನೂ ರಾಮನೆ.'

* * *

ಇನ್ನೊಂದು ಸಂದರ್ಭದಲ್ಲಿ ಮಹಿಮಚರಣ ಪರಮಹಂಸರನ್ನು ಕೇಳಿದ : 'ಭಗವಂತನ ಕಡೆ ಮನಸ್ಸು ಹರಿಯಲಾರಂಭಿಸಿದ ಮೇಲೆ, ಈ ಸಂಸಾರದಲ್ಲಿ ಇರಲಾಗುತ್ತದೆಯೆ?'

ಶ್ರೀರಾಮಕೃಷ್ಣರು : 'ಏನು ನೀನು ಹೇಳೋದು? ಸಂಸಾರದಲ್ಲಿ ಇರೋದಿಲ್ಲಾ ಅಂದರೆ ಹೋಗುವುದು ತಾನೆ ಎಲ್ಲಿಗೆ? ನನಗೆ ಅನುಭವವಾಗುತ್ತಿದೆ, "ನಾವೆಲ್ಲಿ ಇದ್ದರೂ ಅದು ಅಯೋಧ್ಯೆಯೆ" ಅಂತ. ಈ ಇಡೀ ಸಂಸಾರವೆ ರಾಮನ ಅಯೋಧ್ಯೆ. ಗುರುವಿನಿಂದ ಉಪದೇಶ ಪಡೆದ ನಂತರ ರಾಮಚಂದ್ರ ಹೇಳಿದ, "ನಾನು ಸಂಸಾರವನ್ನು ತ್ಯಾಗ ಮಾಡಿ ಹೋಗುತ್ತೇನೆ" ಅಂತ. ಆತನಿಗೆ ಬುದ್ಧಿ ಹೇಳಲು ದಶರಥ ವಸಿಷ್ಠರನ್ನು ಕರೆಸಿದ. ವಸಿಷ್ಠ ನೋಡುತ್ತಾನೆ, ರಾಮನಿಗೆ ತೀವ್ರ ವೈರಾಗ್ಯ ಬಂದು ಬಿಟ್ಟಿದೆ. ಆಗ ಆತ ಹೇಳಿದ : "ಓ ರಾಮ, ಮೊದಲು ನನ್ನೊಡನೆ ವಿಚಾರ ಮಾಡು. ಬಳಿಕ ಸಂಸಾರ ತ್ಯಜಿಸುವೆಯಂತೆ. ಒಳ್ಳೆಯದು, ಒಂದು ಪ್ರಶ್ನೆ. ಈ ಸಂಸಾರ(ಪ್ರಪಂಚ) ಭಗವಂತನಿಂದ ಪ್ರತ್ಯೇಕವಾದುದೆ? ಅದು ಹಾಗಿದ್ದರೆ ಅದನ್ನು ತ್ಯಜಿಸು." ರಾಮ ನೋಡುತ್ತಾನೆ, ಭಗವಂತನೇ ಜೀವ, ಜಗತ್ತು ಎಲ್ಲಾ ಆಗಿದ್ದಾನೆ. ಆತನ ಸತ್ವದಿಂದಲೇ ಎಲ್ಲವೂ ಸತ್ಯವಾಗಿ ತೋರಿಬರುತ್ತಿದೆ. ಆಗ ರಾಮಚಂದ್ರ ತೆಪ್ಪಗೆ ಕುಳಿತ.' ✡